**ಓಎಸ್ ನಂಃ 313/2011 ಡಿ.ಡಬ್ಲ್ಯೂ - 1**

**ದಿನಾಂಕಃ 08.04.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.**

ಪಾಟೀಸವಾಲುಃ ವಾದಿಯ ಪರ ಶ್ರೀ ಎನ್ ಎಸ್ ಸಿ ವಕೀಲರಿಂದಃ

ನಿಮಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದಾ ಎಂದರೆ ಬರುವುದಿಲ್ಲ. ನಿಮ್ಮ ಮನೆಯ ದಕ್ಷಿಣಕ್ಕೆ ರಸ್ತೆ ಇರುತ್ತದೆ ಎಂದರೆ ಹೌದು. ಅದೇ ರೀತಿ ನೀವು ವಾಸ ಇರುವ ಮನೆಯ ಉತ್ತರಕ್ಕೆ ತೆಂಗಿನ ಮರ ಹಾಗೂ ಖಾಲಿ ಜಾಗ ಇರುತ್ತದೆ ಎಂದರೆ ಹೌದು. ನಂತರ ಉತ್ತರ ದಿಕ್ಕಿಗೆ ಅಂದರೆ ತೆಂಗಿನ ಮರ ಹಾಗೂ ಖಾಲಿ ಜಾಗದ ಆದ ನಂತರ ಮೂಗಿ ನಾರಾಯಣಪ್ಪ ಬರುತ್ತಾರೆ ಎಂದರೆ ಹೌದು. ಅದೇ ರೀತಿ ನಿಮ್ಮ ಮನೆಯ ಪೂರ್ವಕ್ಕೆ ಸುಬ್ಬಕ್ಕ ಕೋಂ ನರಸಿಂಹಪ್ಪರವರ ಮನೆ ಎಂದರೆ ಹೌದು. ಗಂಗಮ್ಮ ದೇವಸ್ಥಾನದ ಹತ್ತಿರ ನಿಮ್ಮದು ಒಂದು ಗುಡಿಸಲು ಇರುತ್ತದೆ ಎಂದರೆ ಹೌದು. ಗುಡಿಸಲ ಮನೆ ಉತ್ತರಕ್ಕೆ ಗಂಗಮ್ಮ ದೇವಿ ದೇವಸ್ಥಾನ ಎಂದರೆ ಹೌದು. ಪೂರ್ವಕ್ಕೆ ರಸ್ತೆ ಇದೆ ಎಂದರೆ ಹೌದು. ಪಶ್ಚಿಮಕ್ಕೆ ರಸ್ತೆ ಇರುತ್ತದೆ ಎಂದರೆ ಹೌದು. ದಕ್ಷಿಣಕ್ಕೆ ನಾರಾಯಣಪ್ಪ ರವರ ಮನೆ ಇರುತ್ತದೆ ಎಂದರೆ ಹೌದು. ನಿಡಿ **6** ರಲ್ಲಿ ಕಾಣುವ ಹುಲ್ಲಿನ ಜಾಗ ನನ್ನ ನಿಮ್ಮದಾ ಎಂದರೆ ಇಲ್ಲ ನನ್ನ ಚಿಕ್ಕಪ್ಪನವರದ್ದು, ಪಾಯ ಮಾತ್ರ ನಮ್ಮದು. ಸದರಿ ನಿಡಿ **6** ರಲ್ಲಿ ಕಾಣುವ ಹುಲ್ಲಿನ ಜಾಗ ನಿಮ್ಮ ಚಿಕಪ್ಪನವರದ್ದು ಎಂದು ದಾಖಲಾತಿ ಕೊಟ್ಟಿರುತ್ತೀರಾ ಎಂದರೆ ಕೊಟ್ಟಿಲ್ಲ. ಸದರಿ ಜಾಗ ನಿಮ್ಮದೇ ಆಗಿರುತ್ತದೆ ನೀವು ಉತ್ತರಕ್ಕೆ ಒತ್ತುವರಿ ಮಾಡಿಕೊಂಡು ಬಂದಿರುತ್ತೀರಾ ಎಂದರೆ ಹೌದು. ನಂತರ ಮುಂದುವರೆದು ಅವರ ಜಾಗಕ್ಕೆ ಹೋಗಿಲ್ಲ. ಅವರ ಜಾಗದಲ್ಲಿ ಮನೆ ಕಟ್ಟಿಕೊಂಡಿರುತ್ತಾರೆ. ನಿಡಿ 7 ರಲ್ಲಿ ನೀವು ತೆಂಗಿನ ಮರದಿಂದ ಹಿಂದಿನ ಮನೆಯನ್ನು

ಒತ್ತುವರಿ ಮಾಡಿರುವುದು ಕಂಡು ಬಂದಿರುತ್ತದೆ ಎಂದರೆ ಹೌದು. ನಿಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿರುವ ವಿಚಾರ ಗೊತ್ತಾ ಎಂದರೆ ಗೊತ್ತು. ನಿಡಿ 13 ಅರ್ಜಿಯನ್ನು ನೀವು ಕೊಟ್ಟಿಲ್ಲ ಎಂದರೆ ನಾವೇ ಕೊಟ್ಟಿರುತ್ತೇವೆ. ಪಂಚಾಯತಿಯಲ್ಲಿ ನಿಮಗೆ ದಾಖಲಾತಿಯನ್ನು ಕೊಡಲು ಬರುವುದಿಲ್ಲ ಎಂದು ಹೇಳಿರುತ್ತಾರೆ ಎಂದರೆ ಹೌದು.

ಮರು ವಿಚಾರಣೆಃ ಇಲ್ಲ.

(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಸಾ ಓ ಹೇ ಕೇ ಸ ಅದೆ.

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.